## ಸೂಜಿ ಬದಲು ನ್ಯಾನೋ

ಸೂಜಿ ಚುಚ್ಚಿಸಿಕೊಳ್ಳಲು ಮನಸ್ಸಿಲ್ಲವೇ? ಚಿಂತಿಸಬೇಡಿ. ನೋವಾಗದ ನ್ಯಾನೋ ಚೀಟಿ ಬರುತ್ತಿದೆ. ಬಹಳ ದಿನಗಳಿಂದ ಸಂಶೋಧನೆಯ ಹಾದಿಯಲ್ಲಿದ್ದ ಸೂಜಿ ಮುಕ್ತ ಲಸಿಕೆ ಇದೀಗ ನಿಜವಾಗುವ ಸಾಧ್ಯತೆಗಳು ಹೆಚ್ಚಿವೆ.

ಸಾಮಾನ್ಯವಾಗಿ ಚುಚ್ಚುಮದ್ದನ್ನು ಮಾಂಸಖಂಡಗಳಿಗೆ ಸೂಜಿಯ ಮೂಲಕ ನೀಡಲಾಗುತ್ತದೆ. ಆದರೆ ಈಗ ಅಭಿವೃದ್ಧಿಪಡಿಸಲಾಗಿರುವ ಲಸಿಕೆ ತುಂಬಿದ ನ್ಯಾನೋ ಚೀಟಿಯನ್ನು ಚರ್ಮಕ್ಕೆ ಅಂಟಿಸಿದರೆ ಸಾಕು. ರೋಗನಿರೋಧಕ ಜೀವಕೋಶಗಳ ಮೂಲಕ ಲಸಿಕೆ ದೇಹ ಸೇರುತ್ತದೆ.

ಈಗಾಗಲೇ ಪ್ರಾಣಿಗಳ ಮೇಲೆ ನಡೆಸಲಾದ ಅಧ್ಯಯನದಲ್ಲಿ ಇದರ ಸಾಮರ್ಥ್ಯ ಸಾಬೀತಾಗಿದೆ. ಚುಚ್ಚುಮದ್ದಿಗಿಂತ 150 ಪಟ್ಟು ಪರಿಣಾಮಕಾರಿ ಎಂದು ಸಾಬೀತಾಗಿದೆ. ಜತೆಗೆ ಸಿರಿಂಜ್‌ಗಳಂತೆ ಇದನ್ನು ತಂಪು ಪೆಟ್ಟಿಗೆಯಲ್ಲಿ ಇಡುವ ಅಗತ್ಯ ಇರುವುದಿಲ್ಲ. ಏಕೆಂದರೆ ಆಫ್ರಿಕಾದಂತ ಬಿಸಿಖಂಡದಲ್ಲಿ ಬಹುತೇಕ ಲಸಿಕೆಗಳು ಕೆಲಸ ಮಾಡುತ್ತಿರಲಿಲ್ಲ. ಆದರೆ ಈ ನೂತನ ತಂತ್ರಜ್ಞಾನದಿಂದ ಅಭಿವೃದ್ಧಿಗೊಂಡ ನ್ಯಾನೋ ಚೀಟಿಯನ್ನು ಅತಿ ಕಡಿಮೆ ದರದಲ್ಲಿ ಪರಿಣಾಮಕಾರಿ ಬಳಸಬಹುದು ಎಂದು ಪ್ರೊಫೆಸರ್ ಮಾರ್ಕ್ ಕೆಂಡಲ್ ಹೇಳಿದರು.

ಆಸ್ಟ್ರೇಲಿಯಾದ ಬಯೋ ಎಂಜಿನಿಯರಿಂಗ್ ಹಾಗೂ ನ್ಯಾನೋ ತಂತ್ರಜ್ಞಾನ ಸಂಸ್ಥೆಯ ಪ್ರೊ.ಮಾರ್ಕ್ ಕೆಂಡಲ್ ಅವರು ಇದರ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವಹಿಸಿದ್ದಾರೆ.

## ಧೂಮಪಾನದಿಂದ ಮೆದುಳು ಸಂಕುಚಿತ

ಅಧಿಕ ರಕ್ತದೊತ್ತಡ, ಧೂಮಪಾನ, ಮಧುಮೇಹ, ಸ್ಥೂಲಕಾಯದಂತ ಸಮಸ್ಯೆಗಳಿಂದ ಬಳಲುವವರು ಒಂದ ದಶಕದ ನಂತರ ಮೆದುಳು ಸಂಕುಚಿತವಾಗುವುದರ ಜತೆಗೆ ತೀವ್ರತರವಾದ ಸಮಸ್ಯೆಯಿಂದ ಬಳಲಲಿದ್ದಾರೆ ಎಂದು ಹೊಸ ಅಧ್ಯಯನವೊಂದು ತಿಳಿಸಿದೆ.

ಈ ಎಲ್ಲಾ ಸಮಸ್ಯೆಗಳಿರುವ ವ್ಯಕ್ತಿಯ ಮೆದುಳು ನಿಧಾನವಾಗಿ ಕುಗ್ಗುತ್ತಾ ಸಾಗುತ್ತದೆ. ದಶಕದ ನಂತರ ನೆನಪಿನ ಶಕ್ತಿ ಕಡಿಮೆಯಾಗುವುದು, ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಹಿಂಜರಿಕೆ ಇತ್ಯಾದಿ ಮೆದುಳಿಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳು ಕಾಡಲಿವೆ ಎಂದು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಚಾರ್ಲ್ಸ್ ಡಿ ಕಾರ್ಲಿ ಅವರ ನಡೆಸಿ ಅಧ್ಯಯನದಿಂದ ತಿಳಿದುಬಂದಿದೆ.

ಈ ಅಧ್ಯಯನಕ್ಕಾಗಿ 54ರ ವಯೋಮಾನದ 1352 ಮರೆಗುಳಿ ಕಾಯಿಲೆ ಇಲ್ಲದವರನ್ನು ತಪಾಸಣೆಗೆ ಒಳಪಡಿಸಲಾಯಿತು. ಸಾಮಾನ್ಯ ರಕ್ತದೊತ್ತಡ ಇರುವವರಿಗೆ ಹೋಲಿಸಿದಲ್ಲಿ ಅಧಿಕ ರಕ್ತದೊತ್ತಡ ಇರುವವರ ಮೆದುಳಿನ ಸಣ್ಣ ಭಾಗ ಹಾನಿಗೊಳಗಾಗಿದ್ದು ತಿಳಿದು ಬಂತು. ಇದರಂತೆ ಮಧುಮೇಹಿಗಳ ಮೆದುಳಿನ ಗಾತ್ರ ಕುಗ್ಗಿದ್ದು ದಾಖಲಾಗಿದೆ.

ಧೂಮಪಾನಿಗಳ ಮೆದುಳು ಸಂಕುಚಿತವಾಗುವುದರ ಜತೆಗೆ ಕೆಲ ಭಾಗಗಳು ಹಾನಿಗೊಳಗಾಗಿದ್ದು ತಿಳಿದುಬಂದಿದೆ. ಇದರಂತೆ ಸ್ಥೂಲಕಾಯಿಗಳಲ್ಲೂ ಸಾಕಷ್ಟು ಸಮಸ್ಯೆಗಳು ಕಂಡುಬಂದಿರುವುದು ಈ ಅಧ್ಯಯನದಿಂದ ತಿಳಿದುಬಂದಿದೆ.

## ಎಲೆಕ್ಟ್ರೋಮ್ಯಾಗ್ನೆಟಿಕ್ ತರಂಗ ಮಾರಕ

ಗರ್ಭಿಣಿಯರು ಹೆಚ್ಚು ಕಾಲ ಮೈಕ್ರೋವೇವ್ ಓವನ್, ಹೇರ್ ಡ್ರೈಯರ್ ಹಾಗೂ ವ್ಯಾಕ್ಯೂಮ್ ಕ್ಲೀನರ್ ಬಳಸುತ್ತಿದ್ದರೆ ಹುಟ್ಟಲಿರುವ ಮಗುವಿಗೆ ಅಸ್ತಮಾ ಕಾಯಿಲೆ ಬರಬಹುದಾದ ಸಾಧ್ಯತೆ ಮೂರು ಪಟ್ಟು ಹೆಚ್ಚಲಿದೆಯಂತೆ.

ನಾರ್ಥ್ ಕ್ಯಾರೋಲಿನಾದಲ್ಲಿ 801 ಗರ್ಭಿಣಿಯರನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಇವರಿಗೆ ಹುಟ್ಟಿದ ಮಕ್ಕಳನ್ನು ಮುಂದಿನ 13 ವರ್ಷಗಳ ಕಾಲ ಎಲೆಕ್ಟ್ರಾನಿಕ್ ವೈದ್ಯಕೀಯ ಸಾಧನದ ಸಹಾಯದಿಂದ ನಿಗಾ ಇಡಲಾಯಿತು. ಮಕ್ಕಳು ಬೆಳವಣಿಗೆಯ ಹಂತದಲ್ಲಿದ್ದಾಗ ಅಸ್ತಮಾ ಸಾಧ್ಯತೆಗಳು ಕಂಡುಬಂದಿರುವುದು ವರದಿಯಾಗಿದೆ.

ಎಲೆಕ್ಟ್ರೋಮ್ಯಾಗ್ನೆಟಿಕ್ ತರಂಗಗಳನ್ನು ಹೊರಸೂಸುವ ಎಲೆಕ್ಟ್ರಾನಿಕ್ ವಸ್ತುಗಳಿಗೆ ಗರ್ಭಿಣಿಯರು ತೀರಾ ಒಗ್ಗಿಕೊಳ್ಳುವುದು ಒಳ್ಳೆಯದಲ್ಲ. ಹೀಗಾಗಿ ಗರ್ಭಿಣಿಯರನ್ನು ಮೈಕ್ರೋವೇವ್ ಓವನ್, ಹೇರ್‌ಡ್ರೈಯರ್, ವ್ಯಾಕ್ಯೂಮ್ ಕ್ಲೀನರ್‌ನಂಥ ಸಾಧನದಿಂದ ದೂರವಿಡುವುದು ಆದಷ್ಟು ಉತ್ತಮ ಎಂದು ಅಧ್ಯಯನ ನಡೆಸಿದ ಡಿ-ಕುನ್ ಲಿ ಹೇಳುತ್ತಾರೆ.

■ ಇಎಸ್‌ಎಸ್


“ನನ್ನ ಅಡಿಗೆ ಮನೆ ನನ್ನ ಪರಿಚಯ”



ನಾನು ಗುಣಮಟ್ಟವನ್ನು ಎಂದಿಗೂ ರಾಜಿ ಮಾಡಿಕೊಳ್ಳುವುದಿಲ್ಲ.
ಆದ್ದರಿಂದಲೇ ನಾನು ನಿರಾಲಿ ಅಡಿಗೆಮನೆ ಸಿಂಕನ್ನು ಆಯ್ಕೆ ಮಾಡಿದ್ದು.

ಕೆಲವು ಸರಿಯಾದ ನಿರ್ಣಯಗಳು, ನಿಮ್ಮ ಮಕ್ಕಳ ಶಾಲೆ, ನಿಮ್ಮ ಹೊಸ ಮನೆ, ಅಥವಾ ಯಾಕೆ ನಿಮ್ಮ ಹೊಸ ಕುಟುಂಬದ ವೈದ್ಯರ ಆಯ್ಕೆ ಮಾಡುವಲ್ಲಿ ನೀವು ರಾಜಿ ಮಾಡಿಕೊಳ್ಳುವುದಿಲ್ಲ, ಆದ್ದರಿಂದಲೇ ಸೂಕ್ಷ್ಮ ಬುದ್ದಿಯ ಗೃಹಿಣಿಯರು ಯಾವಾಗಲೂ ನಿರಾಲಿಯನ್ನು ಅದರ ಚಂದ, ಬಾಳಿಕೆಗೆ, ಉಪಯುಕ್ತತೆಗೆ ಮತ್ತು ಜೀವನದಾದ್ಯಂತ ತೊಂದರೆ ರಹಿತ ಕಾರ್ಯ ಶೀಲತೆಗೆ, ಅದನ್ನು ಆಯ್ಕೆ ಮಾಡುವರು.

India's No. 1
NIRALI®
STAINLESS STEEL KITCHEN SINKS

ಉತ್ಪಾದನೆ ಮತ್ತು ಮಾರಾಟ: ಜ್ಯೋತಿ (ಇಂಡಿಯಾ) ಮೆಟಲ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್, ಪೋಸ್ಟ್ ಬಾಕ್ಸ್ ಸಂಖ್ಯೆ: 9136, ವರ್ಲಿ, ಮುಂಬೈ - 400 025,
ದೂರವಾಣಿ : 022-24315500, ಈಮೇಲ್ - nirali@nirali.com
www.niralisinks.com

dattaram.nirali.6.11